**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 84/2023**

**ಪಿಡಬ್ಲ್ಯೂ- 1**

**ಸಿಡಬ್ಲ್ಯೂ- 1**

**ಸಾಕ್ಷಿಗೆ ದಿನಾಂಕ 09-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಎಂ.ಡಿ ಫೈಜುಲ್ಲಾ

ಗಂಡನ ಹೆಸರು : ಎಂ.ಡಿ.ಗೌಸ್

ವಯಸ್ಸು : 49 ವರ್ಷ

ಉದ್ಯೋಗ : ಪೊಲೀಸ್ ನಿರೀಕ್ಷಕರು, ಕನಕಗಿರಿ ಪೊಲೀಸ್ ಠಾಣೆ, ಕೊಪ್ಪಳ ಜಿಲ್ಲೆ

ವಾಸಸ್ಥಳ : ಕನಕಗಿರಿ

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು ಜೂನ್ 2021 ರಿಂದ ಜನವರಿ 2023 ರವರೆಗೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 19-04-2022 ರಂದು ಸಂಜೆ 5 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಬಾತ್ಮಿದಾರರಿಂದ ಕೆಲ್ಲೋಡು ಗ್ರಾಮದ ಸಿದ್ದಲಿಂಗಪ್ಪ ತಂದೆ ಚಂದ್ರಪ್ಪ ಎಂಬುವರು ತನ್ನ ಕಿರಾಣಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ಜ್ಞಾಪನವನ್ನು ತಯಾರಿಸಿ ದೂರನ್ನು ತಯಾರು ಮಾಡಿ ಚಾ.ಸಾ-8 ರವರಿಗೆ ನೀಡಿರುತ್ತೇನೆ. ನಂತರ ಠಾಣಾ ಸಿಬ್ಬಂದಿಗಳಾದ ಚಾ.ಸಾ-4, 5 ಮತ್ತು 6 ರವರೊಡನೆ ಹೋಗುವಾಗ ಎ.ಪಿ.ಎಂ.ಸಿ ಮಾರ್ಕೆಟ್ ಬಳಿ ಚಾ.ಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿ ನಮ್ಮೊಂದಿಗೆ ಬಂದಿರುತ್ತಾರೆ.

ನಂತರ ಸಿಬ್ಬಂದಿ ಮತ್ತು ಪಂಚರೊಡನೆ ಇಲಾಖಾ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಸಂಜೆ 5-30 ಗಂಟೆಗೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು

ಪರಿಶೀಲಿಸಿದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಪೌಚ್‌ಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡು ಬಂತು. ನಾವು ಆತನ ಹತ್ತಿರಕ್ಕೆ ಹೋದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು. ಹಿಡಿಯಲು ಪ್ರಯತ್ನಿಸಿದರು ಸಿಗಲಿಲ್ಲ. ನಂತರ ಪಂಚರಿಗೆ ಓಡಿ ಹೋದ ವ್ಯಕ್ತಿಯ ಹೆಸರು ವಿಳಾಸ ಕೇಳಲಾಗಿ ಸಿದ್ದಲಿಂಗಪ್ಪ ತಂದೆ ಚಂದ್ರಪ್ಪ, 40 ವರ್ಷ, ಕೆಲ್ಲೋಡು ಗ್ರಾಮ ಎಂದು ತಿಳಿದುಬಂತು. ನಂತರ ಪಂಚರ ಸಮಕ್ಷಮ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ನ 35 ರಾಜಾ ವಿಸ್ಕಿ ಪೌಚ್ ಗಳು ದೊರೆತವು. ಸದರಿ ಪೌಚ್‌ಗಳನ್ನು ಅಮಾನತ್ತು ಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಹೊಲೆದು ಕೆ.ಎಸ್.ಪಿ ಎಂಬ ಇಲಾಖಾ ಮೊಹರು ಮಾಡಲಾಯಿತು. ಪಂಚನಾಮೆಯನ್ನು ಸಂಜೆ 5-45 ರಿಂದ 6-20 ರವರೆಗೆ ಜರುಗಿಸಲಾಯಿತು. ನಂತರ ಪಂಚನಾಮೆ ಮತ್ತು ಮಾಲನ್ನು ಠಾಣೆಗೆ ತಂದು ಚಾ.ಸಾ-8 ರವರಿಗೆ ನೀಡಿ ಮುಂದಿನ ಕ್ರಮ ಜರುಗಿಸುವಂತೆ ನಿವೇದಿಸಿಕೊಂಡಿರುತ್ತೇನೆ.

**ಸಾಕ್ಷಿಯು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚರಿಗೆ ನೀಡಲಾದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

ಆ ದಿನ ನಮ್ಮನ್ನು ನೋಡಿ ಓಡಿಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ. **ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದ ಪೌಚ್ ಗಳನ್ನು ನೋಡಿ ಗುರುತಿಸಿದ್ದು, 90 ಎಂ.ಎಲ್. ನ 35 ರಾಜಾ ವಿಸ್ಕಿ ಪೌಚ್ ಗಳನ್ನು ಒಟ್ಟಾಗಿ ಮು.ಮಾ-1 ಎಂದು ಗುರುತಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀ ಟಿ.ಆರ್. ವಕೀಲರಿಂದಃ**

ದಿನಾಂಕ 19-04-2022 ರಂದು ನಾನು ಠಾಣೆಯಲ್ಲಿ ಇರುವಾಗ ಸಂಜೆ 5 ಗಂಟೆಗೆ ಬಾತ್ಮಿ ಬಂದಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದರಂತೆ ಅರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುತ್ತಾನೆ ಎಂದು ಚಾ.ಸಾ-8 ರವರಿಗೆ ಜ್ಞಾಪನ ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪಂಚರಿಗೆ ನೋಟೀಸು ನೀಡಿರುವುದಿಲ್ಲ ಮತ್ತು ಚಾ.ಸಾ-2 ಮತ್ತು 3 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ-4, 5 ಮತ್ತು 6 ರವರೊಂದಿಗೆ ಅಬಕಾರಿ ದಾಳಿ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-2 ರಂತೆ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

ಠಾಣಾ ಅಂಕಿಸಂಖ್ಯೆಗೋಸ್ಕರ ಮೇಲಾಧಿಕಾರಿಗಳ ಒತ್ತಡದ ಮೇರೆಗೆ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1 ರಿಂದ 3 ರ ದಾಖಲೆಗಳನ್ನು ಠಾಣೆಯಲ್ಲೇ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**